KATK010048602022

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಇವರ ನ್ಯಾಯಾಲಯದಲ್ಲಿ

ವಿಶೇಷ ಮೊಕದ್ದಮೆ ಸಂಖ್ಯೆ:**468/2022**

ಫಿರ್ಯಾದಿ : ರಾಜ್ಯದ ಪರವಾಗಿ ತುಮಕೂರು ಸಿ.ಇ.ಎನ್. ಪೋಲೀಸ್

ವಿರುದ್ಧ

ಆರೋಪಿತರು : ಅಸಾದುಲ್ಲಾ ಶರೀಫ್ ಮತ್ತು ಇತರರು

<u>ದೋಷಾರೋಪಣೆ</u>

**ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್.** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಆದ ನಾನು ಆರೋಪಿತನಾದ:

1. ಅಸಾದುಲ್ಲಾ ಶರೀಫ್ ಬಿನ್ ನೂರ್ ಮೊಹಮದ್ ಶರೀಫ್, **38** ವರ್ಷ, ಚಾಲಕ, ವಾಸ: ಸರ್ಕಾರಿ ಶಾಲೆ ಹತ್ತಿರ, **1** ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮರಳೂರು ದಿಣ್ಣೆ, ತುಮಕೂರು.

2. ಅಯೂಬ್ ಪಾಶ ಬಿನ್ ಚಾಂದ್ ಪಾಶ, **32** ವರ್ಷ, ಮೆಕ್ಯಾನಿಕ್, ವಾಸ: ಬಾದರ್ ಮಾಸ್ಕ ಪಕ್ಕ, **1** ನೇ ಅಡ್ಡರಸ್ತೆ, ವೀರಸಾಗರ, ಮೆಳೆಕೋಟೆ, ತುಮಕೂರು.

3. ನವಾಜ್, ಬಿನ್ ಫಯಾಜ್, **23** ವರ್ಷ, ವಾಸ: ನ.**27/13, 3** ನೇ ಮುಖ್ಯ ರಸ್ತೆ, ಗಂಗಮ್ಮ ದೇವಸ್ಥಾನದ ಹತ್ತಿರ, ಮಂಗಮ್ಮನ ಪಾಳ್ಯ, ಬೆಂಗಳೂರು ದಕ್ಷಿಣ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿ.**06.06.2022** ರಂದು ಬೆಳಿಗ್ಗೆ **10.00** ಗಂಟೆ ಸಮಯದಲ್ಲಿ ತುಮಕೂರು ಸಿ.ಇ.ಎನ್. ಪೋಲೀಸ್ ಠಾಣಾ ಸರಹದ್ದು ಮರಳೂರು ದಿಣ್ಣೆ ಅಂಕಿತ ಶಾಲೆ ಬಳಿ ಮಾವಿನ ತೋಪಿನ ನಿರ್ಜನ ಪ್ರದೇಶದ ಬಳಿ ಗಸ್ತು ಕಾರ್ಯದಲ್ಲಿದ್ದ ಸಾಕ್ಷಿ-**1** ಶಾಂತಕುಮಾರ್ ಕೆ.ಎಸ್. ಹೆಚ್ ಸಿ **388,** ಸಿ.ಇ.ಎನ್ ಪೋಲೀಸ್ ಠಾಣೆ, ಇವರು **1** ಮತ್ತು **2** ನೇ ಆರೋಪಿತರಾದ

ನಿಮ್ಮನ್ನು ತಪಾಸಣೆ ಮಾಡಿದಾಗ ನೀವು ಕೆಎ-**01** ಎಂ.ಡಿ.-**5009** ನೇ ಟಾಟಾ ಸಫಾರಿ ವಾಹನದಲ್ಲಿ ಮಾದಕ ವಸ್ತುವಾದ ಒಣಗಿದ ಕಡ್ಡಿ ಬೀಜಮಿಶ್ರಿತ **10** ಕೆಜಿ **669** ಗ್ರಾಂ ತೂಕದ ಗಾಂಜಾ ಸೊಪ್ಪನ್ನು ಚಿಕ್ಕ ಚಿಕ್ಕ ಪ್ಯಾಕೇಟ್ ಗಳಲ್ಲಿ ಹಾಕಿ ಹಾಗೂ **4.05** ಗ್ರಾಂ ತೂಕದ ನಿಷೇಧಿತ **MDMA** ಕ್ರಿಸ್ಟಲ್ ಅನ್ನು ಮಾರಾಟ ಮಾಡಿ ಅಕ್ರಮ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕಾನೂನು ಬಾಹಿರವಾಗಿ ಇಟ್ಟುಕೊಂಡಿದ್ದು ಕಂಡುಬಂದಿದ್ದು, ಆ ಮೂಲಕ ಎನ್.ಡಿ.ಪಿ.ಎಸ್.ಕಾಯ್ದೆ ಕಲಂ **20(b)(ii)(B)** ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಎರಡನೆಯದಾಗಿ, 3 ನೇ ಆರೋಪಿಯಾದ ನೀನು **4.05** ಗ್ರಾಂ ತೂಕದ ನಿಷೇಧಿತ **MDMA** ಕ್ರಿಸ್ಟಲ್ ಅನ್ನು **1** ನೇ ಆರೋಪಿಗೆ ಮಾರಾಟ ಮಾಡಲುವ ಸಲುವಾಗಿ ನೀಡಿದ್ದು, ಆ ಮೂಲಕ ಎನ್.ಡಿ.ಪಿ.ಎಸ್.ಕಾಯ್ದೆ ಕಲಂ **22(b)** ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿ.

ಈ ಮೇಲೆ ಹೇಳಿರುವ ಆಪಾದನೆಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ.20.12.2023 ರಂದು ಆದೇಶಿಸಿದ್ದೇನೆ.

(ಬಿ.ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು